ಡಾಕ್ಟರುಗಳು, ನರ್ಸುಗಳು, 'ಒಳ್ಳೇದು ಮಾಡಿದ್ರಿ' ಎಂದು ಕೆಲವರು ಹುಬ್ಬು ಕುಣಿಸಿದರೆ ಮತ್ತೆ ಕೆಲವರು 'ಟೈಮ್ಲಿ ವರ್ಕ್' ಎಂದು ಮೆಚ್ಚುಗೆ ವ್ಯಕ್ತಪಡಿಸಿ ನಸುನಕ್ಕರು. ಬೆಳಗ್ಗೆಯಿಂದ ನಡೆಯುತ್ತಿದ್ದನ್ನು ನೆನಪಿಸಿಕೊಂಡರೆ ತನ್ನನ್ನು ಕೂಡಿಸಿ ಒಬ್ಬೊಬ್ಬರಾಗಿ ಸಾಲಿನಲ್ಲಿ ಬಂದು ಹಬ್ಬದ ತಿನಿಸುಗಳನ್ನು ಬಡಿಸಿದ ಹಾಗೆನಿಸಿತವಳಿಗೆ.

ಕಾಲಿಗೆ ಡ್ರೆಸ್ ಮಾಡಿಸಿಕೊಳ್ಳುವುದಕ್ಕೆ ಬಂದಿದ್ದೇನೆಂದು ತಿಳಿದಾಗ ಅದೇನೋ ಭಯಂಕರವಾದ ಹೊಡೆತ ಬಿದ್ದಿದೆ ಎನ್ನುವ ರೀತಿ ಇಬ್ಬರು ನರ್ಸುಗಳು ನಾ ಮೊದಲು ತಾ ಮೊದಲು ಎನ್ನುವ ಸ್ಪರ್ಧೆಯಲ್ಲಿ ಔಷಧಿ ಹಚ್ಚಿ, ಬ್ಯಾಂಡೇಜ್ ಹಾಕಿ ಮೆಲ್ಲನೆ ಸವರಿದರು. ಇಷ್ಟು ಸಣ್ಣದಕ್ಕೆ ಈ ಅವತಾರವೇ ಎನಿಸುವಷ್ಟು. ಸರಸೂಗೆ ಒಂದರ ಹಿಂದೆ ಒಂದು ನಡೆದದ್ದೆಲ್ಲ ಸೇರಿ ಈಗ ಸುಸ್ತು; ಎಲ್ಲವನ್ನೂ ದೂರವಿಡುವ ಮನಸ್ಸು. ಬೆಳಗ್ಗೆಯ ಎಳೆಬಿಸಿಲಿನ ಹಿತ ಈಗಿಲ್ಲ. ಮೆಲ್ಲನೇರುತ್ತಿದ್ದ ಕಾವು.

ರಸ್ತೆಯಲ್ಲಿ ಅಲ್ಲಲ್ಲಿ ಕಲ್ಲಿನ ಚೂರುಗಳು, ಸಣ್ಣಪುಟ್ಟ ವಸ್ತುಗಳು ಕಾಲಿಗೆ ತಾಕದ ಹಾಗೆ ನಿಧಾನವಾಗಿ ನಡೆದು ಮನೆ ಸೇರಿದಳು. ದಾರಿಯಲ್ಲಿ ಕಂಡದ್ದರ ಬಗ್ಗೆ ಕಣ್ಣುಕಿವಿ ಹಾಕಲಿಲ್ಲ.

ನಾಗೇಂದ್ರ ಕಾಲೇಜಿಗೆ ಹೋಗಿದ್ದ. ಪಕ್ಕದ ಮನೆಯಾಕೆ ಆಕೆಯ ಮನೆಯವರಿಗೆ ಕೊಡುವ ರೀತಿಯಲ್ಲಿಯೇ ಅವಳಿಗೂ ಊಟದ ಡಬ್ಬಿ ತಂದುಕೊಟ್ಟು ಹೋದರು.

ಪೇಪರ್ ಹಾಕುವ ಹುಡುಗ ಬಂದಿದ್ದನೆಂದು ಕಾಣುತ್ತದೆ. ಅಂಗಳದ ಮೂಲೆಯಲ್ಲಿ ಬಿದ್ದಿದ್ದ ಅದನ್ನೆತ್ತಿಕೊಂಡು ಕುರ್ಚಿಯಲ್ಲಿ ಕುಳಿತಳು. ಎಂದಿನಂತೆ ಒಂದಷ್ಟು ಓದಿ ಮತ್ತೆ ಅದನ್ನು ಮಡಿಸಿಡುವ ವೇಳೆಗೆ ಸುಮಾರು ಮುಕ್ಕಾಲು ಗಂಟೆ ಕಳೆದು ಕತ್ತೆತ್ತಿ ಗಡಿಯಾರ ನೋಡಿದ ಅವಳಿಗೆ ಇನ್ನೂ ಬಾಲಾಜಿ ಬರುವುದಿರಲಿ ಅವನಿಂದ ಫೋನೂ ಇಲ್ಲವಲ್ಲ... ಒಂದು ಪಕ್ಷ ಕೆಲಸದೊತ್ತಡವೋ ಮತ್ತೇನೋ ಕಾರಣಕ್ಕೆ ಬಿಡುವೇ ಆಗದೆ ಹೋಗಿರಬಹುದೇ... ಇದೇನೂ ಇಲ್ಲದೆ ತನ್ನ ಹುಟ್ಟುಹಬ್ಬದ ಸಂಗತಿ, ಹುಟ್ಟಿದ ತಾರೀಖು ನೆನಪೇ ಆಗದಿರಬಹುದೇ... ಇದೂ ಸಾಧ್ಯವೆ ಎನ್ನುವ ಆಲೋಚನೆಗಳು ಮುತ್ತಿದವು... ಪರಿಸ್ಥಿತಿ ಏನೇ ಇರಲಿ, ಹೇಗೇ ಇರಲಿ ಅವನು ಬರುವಂತಾಗಲಿ ಎನ್ನುವ ಹಂಬಲ ಅವಳುದ್ದಕ್ಕೂ ಬೆಳೆಯಿತು. ಹುಟ್ಟುಹಬ್ಬದ ದಿನ ಅವನು ಮನೆಯಲ್ಲಿಲ್ಲದ ಉದಾಹರಣೆಯೇ ಇಲ್ಲದ್ದರಿಂದ ಈ ಬಾರಿಯೂ ಹಾಗಾಗುವುದು ಖಚಿತ ಎಂದುಕೊಂಡಾಗ ಒಂದಷ್ಟು ಸಮಾಧಾನ ಅವಳಲ್ಲಿ.

ಸಂಜೆಯಾಯಿತು. ನಾಗೇಂದ್ರ ಬಂದನಷ್ಟೆ. ಸಪ್ಪೆ ಮುಖದ ಸರಸೂನ ಮುಖನೋಡಿ ಮಾತನಾಡಲು ಹೊರಟವನು ಸುಮ್ಮನಾಗಿ ಎಂದಿನಂತೆ ಆಟಕ್ಕೆ ಹೊರಟ.

ರಾತ್ರಿ ಕಳೆದು ಎಂದಿನಂತೆ ಬೆಳಗಾದದ್ದು ಮಾಮೂಲು. ಸರಿಯಾಗಿ ನಿದ್ದೆ ಬಾರದೆ ಮೈಭಾರ ಸರಸೂಗೆ, ಎದ್ದದ್ದು ತಡವಾಗಿ. ಬೇಡವೆಂದರೂ ದಿನಚರಿಯ ಒತ್ತಾಯ. ಇನ್ನೂ ಮಲಗಿದ್ದ ನಾಗೇಂದ್ರನನ್ನು ಎಬ್ಬಿಸುವುದಕ್ಕೆ ಮನಸ್ಸಾಗಲಿಲ್ಲ. ಹಾಲುಮೊಸರಿನ ಕೂಪನ್ ಹಿಡಿದು ಬಾಗಿಲು ದಾಟಿದಳು. ರಸ್ತೆಯಲ್ಲಿ ಕಂಡ ಒಂದಿಬ್ಬರು ತಮ್ಮಷ್ಟಕ್ಕೆ ಸಾಗಿ ಹೋದರು. ರೇವಪ್ಪನೆದರು ಕೂಪನ್ ಹಿಡಿದಾಗ ತುಂಬ ಗಂಭೀರನಾಗಿ ಕಂಡ.

'ಆ ಹುಡುಗಿದೇನಾದ್ರು ಗೊತ್ತಾಯ್ತೆ? ಯಾವಾಗ ಬರೋದು?' ಎಂದಳು.

ಅವನು ಮಾತೇ ಆಡಲಿಲ್ಲ. ಹಾಲು – ಮೊಸರು ಪಾಕೆಟ್‌ಗಳನ್ನು ತಕ್ಷಣವೇ ಕೊಡುವುದು ವಾಡಿಕೆ. ಆದರವನು ಇನ್ನೊಂದು ಬ್ಯಾಗ್ ತೆಗೆದು ಅವಳು ಈ ಮೊದಲು ಕೊಟ್ಟಿದ್ದ ಬಾಲಾಜಿಯ ಫೋಟೊ ವಾಪಸು ಕೊಟ್ಟ.